## ಮಧ್ಯಂತರ ಅರ್ಜಿ  ಮೇಲಿನ ಆದೇಶಃ

ವಾದಿ ಪರ ವಕೀಲರು ಮಧ್ಯಂತರ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 38 ನಿಯಮ 5 ಸಹವಾಚಕ  ಕಲಂ  151  ರಡಿಯಲ್ಲಿ ಸಲ್ಲಿಸಿದ್ದು, ಪ್ರತಿವಾದಿಯರ ಚರ ಚಿರ ಸ್ವತ್ತಾದ ಪ್ಯಾಸೆಂಜರ್ ಆಟೋ ನೊಂದಣಿ ಸಂ ಃ ಕೆಎ 42/ಎ-4815 ವಾಹನದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ದಾವೆಯು ಇತ್ಯರ್ಥವಾಗುವವರೆಗೂ ಸದರಿ ಆಟೋವನ್ನು ಮಾರಾಟ ಮಾಡದಂತೆ ಹಾಗೂ ನ್ಯಾಯಾಲಯದ ತೀರ್ಪು ಮತ್ತು ಜಪ್ತಿ ಆದೇಶ ಮಾಡುವಂತೆ  ಕೋರಿರುತ್ತಾರೆ.

2. ಅರ್ಜಿದಾರರು  ಈ ಮಧ್ಯಂತರ ಅರ್ಜಿಯ ಜೊತೆಗೆ ಶಪಥ  ಪತ್ರವನ್ನು ಪ್ರಮಾಣೀಕರಿಸಿ ಸಲ್ಲಿಸಿದ್ದು, ಅದರಲ್ಲಿ ಕಾರಣಗಳನ್ನು ತಿಳಿಸಿರುತ್ತಾರೆ. ಪ್ರತಿವಾದಿಯವರು

ಚರ ಹಾಗೂ ಸ್ಥಿರ ಸ್ವತ್ತನ್ನು ಈ ದಾವೆ ಇತ್ಯರ್ಥವಾಗುವವರೆಗೆ ಯಾವುದೇ ಭಾಗವನ್ನು ಮಾರಾಟ ಮಾಡದಂತೆ ಆದೇಶಿಸಬೇಕೆಂದು ಕೋರಿರುತ್ತಾರೆ. ಈ ಅರ್ಜಿಯನ್ನು ಪುರಸ್ಕರಿಸುವುದರಿಂದ ಪ್ರತಿವಾದಿಯರಿಗೆ ಯಾವುದೇ ತೊಂದರೆ ನಷ್ಟ ಉಂಟಾಗುವುದಿಲ್ಲ, ಒಂದು ವೇಳೆ ತಿರಸ್ಕರಿಸಿದಲ್ಲಿ ತನಗೆ ತುಂಬಲಾರದ ನಷ್ಟ ಹಾಗೂ ತೊಂದರೆ ಆಗುತ್ತದೆ. ಆದ್ದರಿಂದ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಬೇಕೆಂದು ಕೋರಿರುತ್ತಾರೆ.

3. 1 ರಿಂದ 5 ನೇ ಪ್ರತಿವಾದಿಗಳು ತಮ್ಮ ತಕರಾರನ್ನು ಸಲ್ಲಿಸಿದ್ದು, 1 ರಿಂದ 5 ನೇ ಪ್ರತಿವಾದಿಗಳು ವಿಸ್ತೃತವಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು, ಅದರಲ್ಲಿ ಹೇಳಿರುವ ಹೇಳಿಕೆಗಳನ್ನು ಈ ಮದ್ಯಂತರ ಅರ್ಜಿಗೆ ತಕರಾರು ಎಂದು ತಿಳಿಯುವಂತೆ ಹಾಗೆಯೇ ಲಿಖಿತ ಹೇಳಿಕೆಯಲ್ಲಿ ಹೇಳಿರುವ ಹೇಳಿಕೆಗಳನ್ನು ಈ ಅರ್ಜಿಗೆ ಪರಿಗಣಿಸುವಂತೆಯೂ ಹಾಗೂ ಅದನ್ನೇ ಮತ್ತೆ ಮತ್ತೆ ಹೇಳದೇ ವಾದಿಯು ಹೂಡಿರುವ ದಾವೆಯು ಈ ನ್ಯಾಯಾಲಯದ ವ್ಯಾಪ್ತಿಗೆ ಬರುವುದಿಲ್ಲ, ಹಾಗೆಯೇ ಮೇಲ್ನೋಟಕ್ಕೆ ವಜಾಗೊಳಿಸಲು ಅರ್ಹವಾಗಿರುತ್ತದೆ. ವಾದಿಯು ಹೇಳಿರುವ ಹೇಳಿಕೆಗಳು, ಪ್ರಮಾಣ ಪತ್ರದ ಸಂಗತಿಗಳು ಕಾನೂನು ದೃಷ್ಟಿಯಲ್ಲಿ ನಿಲ್ಲುವಂತದಾಗಿರುವುದಿಲ್ಲ. ಹಾಗೂ 1 ರಿಂದ 5 ನೇ ಪ್ರತಿವಾದಿಗಳಿಗೆ ಹೇಳಿರುವ ಹೇಳಿಕೆಗಳಾಗಲೀ , ಹಾಜರುಪಡಿಸಿರುವ ದಾಖಲೆಗಳಾಗಲೀ ಬಾದ್ಯವಾಗುವುದಿಲ್ಲವಾದ್ದರಿಂದ ವಾದಿಗೆ ಹೆಚ್ಚು ಖರ್ಚು ವಿಧಿಸಿ ಅರ್ಜಿಯನ್ನು ವಜಾ ಮಾಡಬೇಕೆಂದು ಕೋರಿರುತ್ತಾರೆ. ಐಟಂ ನಂ. 2 ರ ಅಟೋರಿಕ್ಷಾ ವಾಹನ ನೊಂದಣಿ ಸಂಃ ಕೆಎ 42 ಎ 4815 ರ ವಾಹನದ ದಾಖಲೆಗಳನ್ನು ಈ ಸಾಲಕ್ಕೆ ಕೊಟ್ಟಿರುವುದಿಲ್ಲ, ಒಂದು ವೇಳೆ ಕೊಟ್ಟಿದ್ದರೂ ಸಾಲದ ಹಣ ಮತ್ತು ಬಡ್ಡಿ ಸಮೇತ ಹಣವನ್ನು ತೀರಿಸಿರುತ್ತಾರೆ. ಹಾಗೆಯೇ ಪ್ರತಿವಾದಿಗಳು ವಾದಿಗೆ ವಾಪಸ್ಸು ನೀಡಿರುವ ಅಸಲು ಸಾಲ ಮತ್ತು ಬಡ್ಡಿಗೆ ನಿಖರವಾದ ದಿನಾಂಕಗಳು ವಾದಿಗೆ ಕೊಟ್ಟ ಹಣವನ್ನು ಎಲ್ಲಿಂದ ಹೇಗೆ ತಂದರೂ ಎಂಬ ಬಗ್ಗೆ ಬ್ಯಾಂಕ್ ದಾಖಲೆಗಳು, ವಾದಿಯು ಹಣವನ್ನು ವಾಪಸ್ಸು ಪಡೆದು ಕೊಂಡಿರುವುದಕ್ಕೆ ವಿಡಿಯೋ ದಾಖಲೆಗಳಿವೆಯಾದ್ದರಿಂದ ವಾದಿಗೆ ಯಾವುದೇಹಣವನ್ನು ಪಾವತಿ ಮಾಡಬೇಕಾಗಿರುವುದಿಲ್ಲವಾದ್ದರಿಂದ ಅರ್ಜಿಯಲ್ಲಿ ತಿಳಿಸಿರುವಂತೆ ದಾವೆ ಇತ್ಯರ್ಥವಾಗುವವರೆವಿಗೂ ಆಟೋವನ್ನು ಮಾರಾಟ ಮಾಡದಂತೆ ಅದೇಶ ನೀಡಲು ಬರುವುದಿಲ್ಲ ಹಾಗೂ ಐಟಂ ನಂ 2 ರ ಅಟೋ ರಿಕ್ಷಾ ಸಂ ಕೆಎ 42/ಎ 4815 ರ ವಾಹನವು ಸುಸ್ಥಿತಿಯಲ್ಲಿರುವಾಗಲೇ ವಾಹನವನ್ನು ಬೇರೆಯವರಿಗೆ ಮಾರಾಟ ಮಾಡಿದ್ದು ಈಗ ಸದರಿ ಆಟೋವು ಪ್ರತಿವಾದಿಗಳ ಸ್ವಾಧೀನದಲ್ಲಿರುವುದಿಲ್ಲ ಮತ್ತು ಸದರಿ ಆಟೋವನ್ನು ಸಾಲಕ್ಕಾಗಿ ಜಾಮೀನು ನೀಡಿರುವುದಿಲ್ಲ ಹಾಗೂ ಈ ಹಂತದಲ್ಲಿ ವಾದಿಯು ಈ ಅರ್ಜಿಯನ್ನು ಸಲ್ಲಿಸಲು ಬರುವುದಿಲ್ಲ ಸದರಿ ದಾವೆಯು ವಿಚಾರಣಾ ಹಂತದಲ್ಲಿದ್ದು ಮದ್ಯಂತರ

ಅರ್ಜಿಯನ್ನು ಸಲ್ಲಿಸಲು ಬರುವುದಿಲ್ಲ, ಸದರಿ ಅರ್ಜಿಯು ಕಾನೂನು ಬಾಹಿರ ಮತ್ತು ನಿಯಮ ಬಾಹಿರವಾಗಿರುತ್ತದೆ. ಆದ್ದರಿಂದ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

4. ಈ ಮಧ್ಯಂತರ ಅರ್ಜಿಯನ್ನು ತೀರ್ಮಾನ ಮಾಡಲು ಈ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಉದ್ಭವವಾಗಿರುತ್ತವೆಃ-

ಃಅಂಶಗಳುಃ

1. ಈ ದಾವೆಯನ್ನು ಪರಿಣಾಮಕಾರಿಯಾಗಿ ತೀರ್ಮಾನಮಾಡಲು ಅರ್ಜಿಯನ್ನು ಪುರಸ್ಕರಿಸುವ ಅಗತ್ಯತೆ ಇದೆಯೇ?

2. ಮಾಡುವ ಆದೇಶ ಏನು?

5. ವಾದವನ್ನು ಆಲಿಸಲಾಯಿತು.

6. ಈ ನ್ಯಾಯಾಲಯವು ಕಡತಗಳಲ್ಲಿರುವ ಎಲ್ಲಾ ಅಂಶಗಳನ್ನು ಪರಿಶೀಲಿಸಿರುತ್ತದೆ ಮತ್ತು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಚರ್ಚಿಸಿದ ಕಾರಣಗಳಿಂದ ಈ ಕೆಳಕಂಡಂತೆ ಉತ್ತರಿಸಿದೆ.

ಅಂಶ ಸಂಖ್ಯೆ1 ಃ ಸಕಾರಾತ್ಮಕವಾಗಿ
ಅಂಶ ಸಂಖ್ಯೆ2 ಃ ಅಂತಿಮ ಆದೇಶದಂತೆ ಈ
ಕೆಳಕಂಡಂತೆ ಚರ್ಚಿಸಿದ ಕಾರಣಗಳಿಗಾಗಿ,

ಕಾರಣಗಳು

7. ಅಂಶ ಸಂಖ್ಯೆಃ1ಃ ಅರ್ಜಿದಾರರು ಪ್ರಸ್ತುತ ಅರ್ಜಿಯನ್ನು ವಾದಿ ಪರ ವಕೀಲರು ಮಧ್ಯಂತರ ಅರ್ಜಿಯನ್ನು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 38 ನಿಯಮ 5 ಸಹವಾಚಕ ಕಲಂ 151 ರಡಿಯಲ್ಲಿ ಸಲ್ಲಿಸಿದ್ದು, ಪ್ರತಿವಾದಿಯರ ಚರ ಚಿರ ಸ್ವತ್ತಾದ ಪ್ಯಾಸೆಂಜರ್ ಆಟೋ ನೊಂದಣಿ ಸಂ ಃ ಕೆಎ 42/ಎ-4815 ವಾಹನದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ದಾವೆಯು ಇತ್ಯರ್ಥವಾಗುವವರೆಗೂ ಸದರಿ ಆಟೋವನ್ನು ಮಾರಾಟ ಮಾಡದಂತೆ ಹಾಗೂ ನ್ಯಾಯಾಲಯದ ತೀರ್ಪು ಮತ್ತು ಜಪ್ತಿ ಆದೇಶ ಮಾಡುವಂತೆ ಕೋರಿರುತ್ತಾರೆ. 1 ರಿಂದ 5 ನೇ ಪ್ರತಿವಾದಿಗಳು ತಮ್ಮ ತಕರಾರನ್ನು ಸಲ್ಲಿಸಿ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

**As per order 38 R 5 of CPC reads as follows**

Where defendant may be called upon to furnish security for production of property.

1. Where, at any stage of a suit, the court is satisfied, by affidavit or otherwise, that the defendant, with intent to obstruct or delay the execution of any decree that may be passed against him-

a) is about to dispose of the whole or any part of his property, or

b) is about to remove the whole or any part of his property from the local limits of the jurisdiction of the court,

the court may direct the defendant, within a time to be fixed by it, either to furnish security, in such sum as may be specified in the order, to produce and place at the disposal of the court, when required, the said property or the value of the same, or such portion thereof as may be sufficient to satisfy the decree, or to appear and show cause why he should not furnish security.

8. ಪ್ರತಿವಾದಿಯು ತನ್ನ ತಕರಾರಿನಲ್ಲಿ ಈಗಾಗಲೇ ಆಟೋ ರಿಕ್ಷಾ ಮಾರಾಟ ಮಾಡಿರುವುದಾಗಿ ಮತ್ತು ಸದರಿ ಆಟೋ ವಾಹನವು ಪ್ರತಿವಾದಿಗಳ ಸ್ವಾಧೀನದಲ್ಲಿ ಇರುವುದಿಲ್ಲ ಮತ್ತು ಸಾಲದ ಜಾಮೀನಿಗಾಗಿ ನೀಡಿರುವುದಿಲ್ಲವೆಂದು ನಮೂದು ಮಾಡಿರುತ್ತಾರೆ ಮತ್ತು ವಾದಿಯು ದಾವೆ ಇತ್ಯರ್ಥವಾಗುವವರೆಗೂ ಸದರಿ ಆಟೋ ಮಾರಾಟ ಮಾಡದಂತೆ ಹಾಗೂ ನ್ಯಾಯಾಲಯದ ತೀರ್ಪು ಮತ್ತು ಜಪ್ತಿ ಆದೇಶ ಮಾಡುವಂತೆ ಕೋರಿದ್ದು , ನ್ಯಾಯಾಲಯವು ಪ್ರತಿವಾದಿಗೆ ಸದರಿ ಆಟೋ ವಾಹನವನ್ನು ಭದ್ರತೆಯಾಗಿ ಒದಗಿಸಬೇಕೆಂದು ನಿರ್ದೇಶಿಸಲು ವಾದಿಯು ಯಾವುದೇ ಸಕಾರಣಗಳನ್ನು ನೀಡದೇ ಇರುವ ಕಾರಣ ಅರ್ಜಿದಾರರು ಸಲ್ಲಿಸಿರುವ ಈ ಮಧ್ಯಂತರ ಅರ್ಜಿಯು ಊರ್ಜಿತವಾಗಿರುವುದಿಲ್ಲ ಎಂದು ಈ ನ್ಯಾಯಾಲಯವು ಅಭಿಪ್ರಾಯ ಪಟ್ಟು ಅಂಶ ಸಂಖ್ಯೆ:**1** ಅನ್ನು ನಕರಾತ್ಮಕವಾಗಿ ಉತ್ತರಿಸಿದೆ.

9. <u>ಅಂಶ ಸಂಖ್ಯೆ:2ಃ-</u> ಈ ಮೇಲ್ಕಂಡ 1 ನೇ ಅಂಶದಲ್ಲಿ ಚರ್ಚಿಸಿದಂತೆ ಈ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

ಅರ್ಜಿದಾರರು ಸಲ್ಲಿಸಿರುವ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **38** ನಿಯಮ **5** ಸಹವಾಚಕ ಕಲಂ.**151** ರಂತೆ ಮಧ್ಯಂತರ ಅರ್ಜಿಯನ್ನು ತಿರಸ್ಕರಿಸಲಾಗಿದೆ.

For further steps. Call on20.09.2023.

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ .ಎಂ. ಎಫ್?ಸಿ., ಚನ್ನಪಟ್ಟಣ.